ಇ) ಮಾಹಿತಿ ನಮ್ಮಲ್ಲಿಲ್ಲ.

ಈ) ಬೀದರ್ ಜಿಲ್ಲೆಗೆ ಮಾತ್ರ.

ಉ) ಕರ್ನಾಟಕದಲ್ಲಿ ಈಗ ಉಪಯೋಗಿಸಲ್ಪಡುತ್ತಿರುವ ನೀರಿನ ಪ್ರಮಾಣ 4.60 ಟಿ.ಎಂ.ಸಿ.

**ಬಚಾವತ್ ತೀರ್ಪಿನಂತೆ 2000ನೇ ಇಸವಿಯೊಳಗೆ ಕಷ್ಣಾ ನದಿಯ ನೀರಿನ ಬಳಕೆ**

245 - ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಬಚಾವತ್ ತೀರ್ಪಿನಂತೆ 2000ನೇ ಇಸವಿಯೊಳಗೆ ತನ್ನ ಪಾಲಿನ ಕೃಷ್ಣಾ ನದಿಯ ನೀರನ್ನು ಪೂರ್ಣವಾಗಿ ಬಳಸಿಕೊಳ್ಳಲು ರಾಜ್ಯ ಸರ್ಕಾರದ ಮುಂದಿರುವ ಕಾರ್ಯಕ್ರಮಗಳೇನು?*

*ಆ) ಇದುವರೆವಿಗೂ ರಾಜ್ಯ ಸರ್ಕಾರ ಕೃಷ್ಣಾ ನದಿಯಿಂದ ಎಷ್ಟು ಟಿ.ಎಂ.ಸಿ. ನೀರನ್ನು ಉಪಯೋಗಿಸಿಕೊಂಡಿದೆ?*

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ರಾಜ್ಯದ ಪಾಲಿನ ನೀರನ್ನು ಬಳಸಲು ಒಂದು ಸಮಗ್ರ ಯೋಜನೆಯನ್ನು ತಯಾರು ಮಾಡಲಾಗಿದ್ದು, ಅದನ್ನು 2000 ಇಸವಿಯೊಳಗೆ ಕಾರ್ಯರೂಪಕ್ಕೆ ತರಲು ಪ್ರಯತ್ನ ಮಾಡಲಾಗುತ್ತಿದೆ.

ಆ) ಈಗ ಮುಗಿಸಿರುವ ಯೋಜನೆಗಳಿಂದ ಮತ್ತು ಭಾಗಶಃ ಕಾರ್ಯರೂಪದಲ್ಲಿರುವ ಯೋಜನೆಗಳಿಂದ ಸುಮಾರು 472ಟಿ.ಎಂ.ಸಿ. ನೀರನ್ನು ಉಪಯೋಗ ಮಾಡಬಹುದಾಗಿದೆ.

**ಗಡಿ ಪ್ರದೇಶಗಳಲ್ಲಿರುವ ತಾಲ್ಲೂಕುಗಳ ಅಭಿವೃದ್ಧಿ**

11 - ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಗಡಿ ಪ್ರದೇಶದಲ್ಲಿರುವ ತಾಲ್ಲೂಕುಗಳ ಅಭಿವೃದ್ಧಿಗಾಗಿ 1990-91-92-93-94-95 ವರ್ಷಗಳಲ್ಲಿ ನಿಗಧಿಪಡಿಸಿರುವ ಹಣದ ಮೊತ್ತವೆಷ್ಟು?*

*ಆ) ಕೆಲವೇ ತಾಲ್ಲೂಕ್‌ಗಳಿಗೆ ಹೆಚ್ಚಿನ ಮೊತ್ತವನ್ನು ಮಂಜೂರು ಮಾಡಿರುವ ಬಗ್ಗೆ ಮುಖ್ಯ ಕಾರಣಗಳೇನು? - ಆ ತಾಲ್ಲೂಕ್ ಗಳ ಹೆಸರು ಮತ್ತು ಮಂಜೂರಾದ ಹಣದ ಮೊತ್ತವೆಷ್ಟು?*

*ಇ) ಹಿಂದಿನ ಬಜೆಟ್ ಅಧಿವೇಶನದಲ್ಲಿ ಮಾಜಿ ಹಣಕಾಸಿನ ಮಂತ್ರಿಗಳು ವರ್ಷಕ್ಕೆ ಒಟ್ಟು ರೂ.15 ಕೋಟಿಗಳು ಮಂಜೂರು ಮಾಡುತ್ತೇವೆ ಎಂದು ಆಶ್ವಾಸನೆ ಕೊಟ್ಟಿರುವ ಪ್ರಯುಕ್ತ ಆ ಆಶ್ವಾಸನೆಯನ್ನು ಉಳಿಸಿಕೊಳ್ಳಲು ಸರ್ಕಾರದವರು ತಕ್ಕ ಕಾರ್ಯಕ್ರಮ ಕೈಗೊಳ್ಳುವರೇ?*

*ಈ) ಇಂತಹ ಗಡಿ ಪ್ರದೇಶದ ತಾಲ್ಲೂಕುಗಳೆಷ್ಟು, ಜಿಲ್ಲಾವಾರು ಸಂಖ್ಯೆ ಅವುಗಳ ಕೆಲಸಗಳೇನು?*

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) 1990-91ನೇ ಸಾಲಿನ ಗಡಿ ಪ್ರದೇಶ ಅಭಿವೃದ್ಧಿ ಕಾರ್ಯಕ್ರಮಕ್ಕೆ ರೂ.5 ಕೋಟಿಗಳನ್ನು ಮಂಜೂರು ಮಾಡಲಾಗಿದೆ. 1991-92ನೇ ಸಾಲಿನಿಂದ 1994-95ರ ವರೆಗೆ ಪ್ರತಿ ವರ್ಷಕ್ಕೆ ರೂ.10 ಕೋಟಿಗಳಂತೆ ಹಣವನ್ನು ಒದಗಿಸಲು ಉದ್ದೇಶಿಸಲಾಗಿದೆ.